# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹಗರಿಬೊಮ್ಮನಹಳ್ಳಿ.

ಉಪಸ್ಥಿತರುಃ ಶ್ರೀಮತಿ ಭಾಗ್ಯಲಕ್ಷ್ಮಿ ಬಿ.ಕಾಂ.ಎಲ್.ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ
ದಂಡಾಧಿಕಾರಿಗಳು,
ಹಗರಿಬೊಮ್ಮನಹಳ್ಳಿ

**ಅಸಲು ದಾವ ಸಂಖ್ಯೆ: 120 /2021**

ದಿನಾಂಕ **11** ನೇ ಜುಲೈ **2022**

ನಡುವೆ **:**

ಶ್ರೀಮತಿ ಡಿ. ಭೀಮಬಾಯಿ ಮತ್ತು ಇತರರು

...... ವಾದಿಯರು

ಮತ್ತು **:**

ಶ್ರೀಮತಿ ಡಿ. ರಾಮಿಬಾಯಿ

..... ಪ್ರತಿವಾದಿ

ಮಧ್ಯಂತರ ಅರ್ಜಿ ಸಂಖ್ಯೆ **- I**

ವಾದಿಯರು

1. ಶ್ರೀಮತಿ ಡಿ.ಭೀಮಿಬಾಯಿ ಕೋಂ ರಾಮನಾಯ್ಕ
   ವಯಸ್ಸು 55 ವರ್ಷ, ಮನೆಕೆಲಸ
   ವಾಸಃ ಮರಿಯಮ್ಮನಹಳ್ಳಿ,ತಾಂಡ,
   ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ .
2. ಶ್ರೀ ಡಿ. ತಿಪ್ಪೇಸ್ವಾಮಿನಾಯ್ಕ ಬಿನ್ ಪಿರ್ಯಾನಾಯ್ಕ
   ವಯಸ್ಸು 51 ವರ್ಷ, ಸರ್ಕಾರಿ ಕೆಲಸ,
   ವಾಸಃ ಕೋಗಳಿ ತಾಂಡ, ಹೆಚ್ ಬಿ ಹಳ್ಳಿ ತಾಲ್ಲೂಕು,
   ವಿಜಯನಗರ ಜಿಲ್ಲೆ .
3. ಶ್ರೀಮತಿ ಡಿ.ಶಾಂತಿಬಾಯಿ ಕೋಂ ಲೇಟ ನೀಲ್ಯಾನಾಯ್ಕ
   ವಯಸ್ಸು 45 ವರ್ಷ, ಮನೆಕೆಲಸ
   ವಾಸಃ ವಾಸಃ ಕೋಗಳಿ ತಾಂಡ, ಹೆಚ್ ಬಿ ಹಳ್ಳಿ ತಾಲ್ಲೂಕು,
   ವಿಜಯನಗರ ಜಿಲ್ಲೆ .
4. ಶ್ರೀ ಡಿ. ಪಂಪಾಪತಿನಾಯ್ಕ ಬಿನ್ ಶೇಕ್ರಾನಾಯ್ಕ

ವಯಸ್ಸು 40 ವರ್ಷ, ವ್ಯವಸಾಯ
ವಾಸಃ ಕೋಗಳಿ ತಾಂಡ, ಹೆಚ್ ಬಿ ಹಳ್ಳಿ ತಾಲ್ಲೂಕು,
ವಿಜಯನಗರ ಜಿಲ್ಲೆ.

**......** ವಾದಿ**/**ಅರ್ಜಿದಾರರು

**(** ಪ್ರತಿನಿಧಿಸುವವರುಃ ಶ್ರೀ ಎ.ಕೆ.**,** ವಕೀಲರು **)**

ಮತ್ತು **:**

ಪ್ರತಿವಾದಿಃ 1) ಶ್ರೀಮತಿ ಡಿ. ರಾಮಿಬಾಯಿ ಕೋಂ ಸಾಕ್ರಾನಾಯ್ಕ
ವಯಸ್ಸುಃ 59 ವರ್ಷ, ಮನೆಕೆಲಸ
ವಾಸಃ ವಾಸಃ ಕೋಗಳಿ ತಾಂಡ,
ಹೆಚ್ ಬಿ ಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.

**......** ಪ್ರತಿವಾದಿ**/**ಎದುರುದಾರ

**(ಪ್ರತಿನಿಧಿಸುವವರುಃ ಶ್ರೀ** ವಿ ಕೆ.**, ವಕೀಲರು)**

**ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ** ವಾದಿಗಳು **ಸಲ್ಲಿಸಿದ ಅರ್ಜಿಯ** ನಂ.1 ರ **ಮೇಲಿನ ಆದೇಶ**

ವಾದಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ದಾವಾ ಷೆಡ್ಯೂಲ್ ಆಸ್ತಿಗಳನ್ನು ಪ್ರತಿವಾದಿ, ಆಕೆಯ ಏಜೆಂಟರುಗಳು, ಸೇವಕರು, ಸಂಬಂಧಿಕರು, ನಿಯೋಜಕರು ಹಾಗೂ ಆಕೆಯ ಪರವಾಗಿ ಯಾವುದೇ ವ್ಯಕ್ತಿಗಳು ದಾವಾ ಷೆಡ್ಯೂಲ್ ಆಸ್ತಿಗಳನ್ನು 3 ನೇ ವ್ಯಕ್ತಿಗೆ ಮಾರಾಟ, ಅಡಮಾನ, ದಾನ ಅಥವಾ ವಿಲ್ ನಾಮೆಯನ್ನು ಮಾಡದಂತೆ, ದಾವೆಯು ಅಂತಿಮವಾಗಿ ತೀರ್ಮಾನವಾಗುವವರೆಗೂ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೇಳಿ ಸಲ್ಲಿಸಿರುತ್ತಾರೆ.

2. ಅರ್ಜಿಯ ನಕಲು ಪ್ರತಿ ಪ್ರತಿವಾದಿಗೆ ತಲುಪಿದ ನಂತರ ಪ್ರತಿವಾದಿಯು ಮೆಮೋ ಸಲ್ಲಿಸಿ ಪ್ರತಿವಾದದ ಪತ್ರದಲ್ಲಿ ಬರೆದ ವಿಷಯಗಳನ್ನು ವಾದಿಯ ಮಧ್ಯಂತರ ಅರ್ಜಿಗೆ ತಕರಾರೆಂದು ಪರಿಗಣಿಸಬೇಕೆಂದು ಕೇಳಿ

ಕೊಂಡಿದ್ದು, ಅವರ ಪ್ರತಿವಾದ ಪತ್ರದಲ್ಲಿ ವಾದ ಪತ್ರದ ಎಲ್ಲಾ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

3. ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದವನ್ನು ಆಲಿಸಲಾಯಿತು, ಕಡತವನ್ನು ಪರಿಶೀಲಿಸಲಾಯಿತು.

4. ನನ್ನ ಪರಿಗಣನೆಗೆ ಈ ಕೆಳಗಿನ ಅಂಶಗಳು ಉದ್ಭವವಾಗಿರುತ್ತವೆ.

1) Whether the plaintiff proves prima-facie case in her favour?

2) Whether the plaintiff proves the balance of convenience lies in her favour?

3) Whether the plaintiff would suffer irreparable loss and injury if the prayer of interim injunction is not allowed?

4) What order?

5. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ

**ಅಂಶ-1 : ನಕಾರಾತ್ಮಕವಾಗಿ**

**ಅಂಶ-2 : ನಕಾರಾತ್ಮಕವಾಗಿ**

**ಅಂಶ-3 : ನಕಾರಾತ್ಮಕವಾಗಿ**

**ಅಂಶ-4 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಂದಾಗಿ**

## <u>ಕಾರಣಗಳು</u>

6. **ಅಂಶ-1:-** ವಾದಿಗಳು ಸದರಿ ದಾವೆಯನ್ನು ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ.

7. ವಾದಿಗಳ ಪ್ರಕಾರ, 1 ರಿಂದ 4 ನೇ ವಾದಿಗಳು ಹಾಗೂ ಪ್ರತಿವಾದಿಯು ಹಿಂದು ಅವಿಭಾಕ್ತ ಕುಟುಂಬದ ಸದಸ್ಯರಾಗಿರುತ್ತಾರೆ. ಸದರಿ ವಾದಿಗಳು ಮತ್ತು ಪ್ರತಿವಾದಿಯು ದಿವಂಗತ ಪಿರ್ಯಾನಾಯ್ಕು ಮತ್ತು ತೇಜ್ಲವ್ವರವರ ವಾರಸುದಾರರಾಗಿರುತ್ತಾರೆ. ದಾವಾ ಷೆಡ್ಯೂಲ್ ಆಸ್ತಿಗಳು ಶ್ರೀ ದಿಃ ಪಿರ್ಯಾನಾಯ್ಕುರವರಿಗೆ ಸಂಬಂಧಪಟ್ಟಂತಹ ಆಸ್ತಿಗಳಾಗಿದ್ದು ಸದರಿ ಸ್ವತ್ತುಗಳಿಗೆ ಇವರೇ ಸಂಪೂರ್ಣ ಮಾಲೀಕರಾಗಿದ್ದು, ಅವರ ಜೀವಿತಾವಧಿಯಲ್ಲಿ ಶಾಂತಿಯುತ ಸ್ವಾಧೀನತೆಯಲ್ಲಿದ್ದರು. ಶ್ರೀ ಪಿರ್ಯಾನಾಯ್ಕುರವರು ದಿಃ03-06-1970 ರಂದು 1 ರಿಂದ 4 ನೇ ವಾದಿಗಳನ್ನು ಹಾಗೂ ಪ್ರತಿವಾದಿಯನ್ನು ವಾರಸುದಾರರಾಗಿ ಬಿಟ್ಟು ಮೃತಪಟ್ಟಿರುತ್ತಾರೆ.

***ವಾದಿಗಳು ಮುಂದುವರೆದು :-***

***i) ಐಟಂ ನಂ.1 ರ ಸ್ವತ್ತು ಕೋಗಳಿ ಗ್ರಾಮದ ಸರ್ವೆ ನಂ.175 ರ ಒಟ್ಟು 3 ಎಕರೆ 33 ಸೆಂಟ್ಸ ಸ್ವತ್ತಾಗಿರುತ್ತದೆ.***

***ii) ಐಟಂ ನಂ.2 ರ ಸ್ವತ್ತು ಕೋಗಳಿ ಗ್ರಾಮದ ಸರ್ವೆ ನಂ.106 ರ ಒಟ್ಟು 2 ಎಕರೆ 56 ಸೆಂಟ್ಸ ಸ್ವತ್ತಾಗಿರುತ್ತದೆ.***

***iii) ಐಟಂ ನಂ.3 ರ ಸ್ವತ್ತು ಕೋಗಳಿ ಗ್ರಾಮದಲ್ಲಿರುವ ಮನೆ ನಂ.91, ವಾರ್ಡ ಸಂಖ್ಯೆ 7 ರ ಮನೆ ಸ್ವತ್ತಾಗಿರುತ್ತದೆ.***

***iv) ಐಟಂ ನಂ.4 ರ ಸ್ವತ್ತು ಕೋಗಳಿ ಗ್ರಾಮದಲ್ಲಿರುವ ಮನೆ ನಂ.92, ವಾರ್ಡ ಸಂಖ್ಯೆ 7ರ ಮನೆ ಸ್ವತ್ತಾಗಿರುತ್ತದೆ.***

8. ಶ್ರೀ ಪಿರ್ಯಾನಾಯ್ಕರವರ ಮರಣಾನಂತರ ಸದರಿ ದಾವಾ ಸ್ವತ್ತುಗಳು ಪ್ರತಿವಾದಿಯ ಗಂಡನಾದ ಶ್ರೀ ಲಂಬಾಣಿ ಸಕ್ರನಾಯ್ಕರವರ ಹೆಸರಿನಲ್ಲಿ 1980 ನೇ ಸಾಲಿನಲ್ಲಿ ಮ್ಯುಟೇಶನ್ ದಾಖಲಾತಿಯಾಗಿದ್ದು, ಪ್ರತಿವಾದಿಯ ಗಂಡನು ಸದರಿ ಜಂಟಿ ಕುಟುಂಬದ ಹಿರಿಯ ಸದಸ್ಯನಾಗಿರುತ್ತಾರೆ. ದಾವಾ ಸ್ವತ್ತಿನ ಐಟಂ ನಂ.3 ಮತ್ತು 4ರ ಸ್ವತ್ತುಗಳು ವಾದಿಗಳು ಮತ್ತು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಪ್ರಸ್ತುತ ಪ್ರತಿವಾದಿಯ ಹೆಸರಿನಲ್ಲಿ ಇರುವಂತಹ ಆಸ್ತಿಗಳಾಗಿರುತ್ತವೆ. ಸದರಿ ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಾದಿಗಳು ಮತ್ತು ಪ್ರತಿವಾದಿಯ ನಡುವೆ ಯಾವುದೇ ಪಾಲುವಿಭಾಗವಾಗಿರುವುದಿಲ್ಲ. ಪ್ರತಿವಾದಿಯು ಆತನ ಗಂಡನ ಹೆಸರಿನಲ್ಲಿ ದಾವಾ ಸ್ವತ್ತುಗಳು ಮ್ಯುಟೇಶನ್ ಆಗಿರುವ ಕಾರಣ ತನ್ನ ಹೆಸರಿನಲ್ಲಿ ದಾವಾ ಸ್ವತ್ತುಗಳನ್ನು ವಾದಿಗಳ ಒಪ್ಪಿಗೆ ಹಾಗೂ ಅವರ ಗಮನಕ್ಕೆ ಬಾರದಂತೆ ತನ್ನ ಹೆಸರಿನಲ್ಲಿ ಮ್ಯುಟೇಶನ್ ವರ್ಗಾವಣೆಯನ್ನು ಮಾಡಿಕೊಂಡಿರುತ್ತಾರೆ. ಈ ಮೇಲ್ಕಂಡ ಎಲ್ಲಾ ಕಾರಣಗಳಿಂದ ವಾದಿಗಳು ದಾವೆಯು ಅಂತಿಮವಾಗಿ

ತೀರ್ಮಾನವಾಗುವವರೆಗೂ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿರುತ್ತಾರೆ.

9. ಪ್ರತಿವಾದಿಯು ಸದರಿ ಮಧ್ಯಂತರ ಅರ್ಜಿಗೆ ಅವರ ಪ್ರತಿವಾದ ಪತ್ರವನ್ನೇ ತಕರಾರೆಂದು ಪರಿಗಣಿಸಬೇಕೆಂದು ಕೋರಿರುತ್ತಾರೆ. ಸದರಿ ಪ್ರತಿವಾದ ಪತ್ರದಲ್ಲಿ ಪ್ರತಿವಾದಿಯು, ವಾದಿಗಳು ವಾದ ಪತ್ರದಲ್ಲಿ ಹೇಳಿರುವಂತಹ ಎಲ್ಲಾ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ.

10. ಪ್ರತಿವಾದಿಯ ಪ್ರಕಾರ, ದಾವಾ ಷೆಡ್ಯೂಲ್ ಆಸ್ತಿಗಳು ಈಗಾಗಲೇ ಪಾಲುವಿಭಾಗವಾಗಿದ್ದು, ದಾವಾ ಷೆಡ್ಯೂಲಿನಲ್ಲಿ ಉಲ್ಲೇಖಿಸಿರುವ ಸ್ವತ್ತುಗಳಲ್ಲಿ ಎಲ್ಲಾ ಸ್ವತ್ತುಗಳು ವಾದಿಗಳು ಮತ್ತು ಪ್ರತಿವಾದಿಯ ಜಂಟಿ ಕುಟುಂಬದ ಹಾಗೂ ಪಿತ್ರಾರ್ಜಿತ ಆಸ್ತಿಗಳಾಗಿರುವುದಿಲ್ಲ. ದಾವಾ ಷೆಡ್ಯೂಲ್ ಐಟಂ ನಂ.2 ನೇ ಸ್ವತ್ತನ್ನು ಆಕೆಯ ಗಂಡನ ಜೀವಿತಾವಧಿಯಲ್ಲಿ ಯಮುನಪ್ಪ ಯಾನೆ ಯಮುನಾನಾಯ್ಕ ಬಿನ್ ಗೋವಿಂದನಾಯ್ಕರವರಿಂದ ದಿಃ06-05-1991 ರಂದು ರೂ.11 ಸಾವಿರಗಳ ಪ್ರತಿಫಲವನ್ನು ಕೊಟ್ಟು ಆಕೆಯ ಗಂಡನು ಕೊಂಡಂತಹ ಆಸ್ತಿಯಾಗಿದ್ದು, ಸದರಿ ಆಸ್ತಿಯು ಪ್ರತಿವಾದಿಯ ಗಂಡನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಕಾರಣ ಸದರಿ ದಾವಾ ಷೆಡ್ಯೂಲ್ ಆಸ್ತಿಯ ಮೇಲೆ ವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ಮತ್ತು ಬಾಧ್ಯತೆಗಳು ಇರುವುದಿಲ್ಲ. ಕಾರಣ ವಾದಿಗಳ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

11. **ವಾದಿಗಳು ಅವರ ಅರ್ಜಿಯ ಪುಷ್ಠೀಕರಣಕ್ಕಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ.**

1) ಸರ್ವೆ ನಂ.175 ರ ಆರ್ ಓ ಆರ್ ನ ನಕಲು ಪ್ರತಿ

2) ಸರ್ವೆ ನಂ.106 ರ ಆರ್ ಓ ಆರ್ ನ ನಕಲು ಪ್ರತಿ

3) ಗ್ರಾಮ ಪಂಚಾಯ್ತಿ ಮಾಲವಿ ಇವರು ನೀಡಿದ ದೃಢೀಕರಣ ಪತ್ರ

.

4) 2 ಕರ ಪಾವತಿ ರಶೀದಿಗಳು.

5) ವಂಶವೃಕ್ಷ

6) ಪೀರ್ಯಾನಾಯ್ಕು ರವರ ಮರಣ ಪ್ರಮಾಣಪತ್ರ .

7) ಶ್ರೀಮತಿ ತೇಜಲವ್ವ ರವರ ಮರಣ ಪ್ರಮಾಣಪತ್ರ .

8) ಶ್ರೀಮತಿ ಹಾಲೀಬಾಯಿರವರ ಮರಣ ಪ್ರಮಾಣಪತ್ರ .

9) ಶ್ರೀ ಸಕ್ರನಾಯ್ಕು ಇವರ ಮರಣ ಪ್ರಮಾಣಪತ್ರ .

10) 1995 ನೇ ಸಾಲಿನ ಮತದಾರರ ಪಟ್ಟಿ ಪ್ರತಿ.

11) 1998 ನೇ ಸಾಲಿನ ಮತದಾರರ ಪಟ್ಟಿ ಪ್ರತಿ.

12. **ಪ್ರತಿವಾದಿ ಆಕೆಯ ಅರ್ಜಿಯ ಪುಷ್ಠೀಕರಣಕ್ಕಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ.**

1) ದಿಃ 06-05-1991 ರ ಮೂಲ ಕ್ರಯ ಪತ್ರ

2) ಸರ್ವೆ ನಂ.175 ರ ಪಹಣಿ ಪತ್ರಿಕೆಯ ಪ್ರತಿ

3) ಸರ್ವೆ ನಂ.106-ಬಿ ರ ಪಹಣಿ ಪತ್ರಿಕೆಯ ಪ್ರತಿ

4) ಸರ್ವೆ ನಂ.106-ಎ ರ ಪಹಣಿ ಪತ್ರಿಕೆಯ ಪ್ರತಿ

ಸದರಿ ಮೇಲ್ಕಂಡ ಮಧ್ಯಂತರ ಅರ್ಜಿಯ ಬಗ್ಗೆ ಚರ್ಚಿಸುವ ಮೊದಲು ನ್ಯಾಯಾಲಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುವುದು ಸೂಕ್ತವೆಂದು ಭಾವಿಸುತ್ತದೆ.

It is well settled principle of law that for grant of temporary injunction three factors have to be satisfied

which are prima-facie case, balance of convenience and irreparable loss. In **Dalpat Kumar V/s. Pralhad Singh reported in AIR 1993 SC 276** the Hon'ble Apex Court explained these factors as follows:

> *i) There is a serious disputed question to be tried in the Court and that an act, on the facts before the Court, there is probability of his being entitled to the relief asked for by the plaintiff/defendant.*
>
> *ii) The Court's interference is necessary to protect the party from the species of injury. In other words irreparable injury or danger would ensue before the legal right would bee established at trial and*
>
> *iii) That the comparative hardship or mischief or inconvenience which is likely to offer from withholding the injunction will be greater than that would be likely to acted from granting it.*

ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ವಾದಿಗಳು ಈ ಮೇಲ್ಕಂಡ ಅಂಶಗಳನ್ನು ರುಜುವಾತುಪಡಿಸುತ್ತಾರೆಯೇ ಎಂಬುದನ್ನು ನೋಡಬೇಕಾಗಿರುತ್ತದೆ.

13. ವಾದಿಗಳ ಪ್ರಕಾರ, ದಾವಾ ಷೆಡ್ಯೂಲ್ ಐಟಂ ನಂ.1 ರಿಂದ 4 ರ ಆಸ್ತಿಗಳು ಜಂಟಿ ಅವಿಭಕ್ತ ಕುಟುಂಬದ ಆಸ್ತಿಗಳಾಗಿರುತ್ತವೆ. ಸದರಿ ಆಸ್ತಿಗಳು ಮೂಲತಃ ಪಿರ್ಯಾನಾಯ್ಕುರವರಿಗೆ ಸಂಬಂಧಪಟ್ಟಂತಹ ಆಸ್ತಿಗಳಾಗಿದ್ದು 1 ರಿಂದ 4 ನೇ ವಾದಿಗಳು ಹಾಗೂ ಪ್ರತಿವಾದಿಯು ಸದರಿ ಮೃತ ಪಿರ್ಯಾನಾಯ್ಕುರವರ

ವಾರಸುದಾರರಾಗಿರುತ್ತಾರೆ. ಪ್ರತಿವಾದಿಯ ಗಂಡ ದಿಃ ಸಕ್ರನಾಯ್ಕರವರು ಸದರಿ ಜಂಟಿ ಅವಿಭಕ್ತ ಕುಟುಂಬದ ಹಿರಿಯ ಸದಸ್ಯನಾಗಿರುವ ಕಾರಣ ಆತನ ಜೀವಿತಾವಧಿಯಲ್ಲಿ ಸದರಿ ದಾವಾ ಷೆಡ್ಯೂಲ್‌ನಲ್ಲಿರುವ ಐಟಂ ನಂ.1 ರಿಂದ 4ರ ಸ್ವತ್ತುಗಳನ್ನು ಆತನ ಹೆಸರಿನಲ್ಲಿ ಮ್ಯುಟೇಶನ್ ವರ್ಗಾವಣೆ ಮಾಡಲಾಗಿತ್ತು. ವಾದಿಗಳು ಮತ್ತು ಪತಿವಾದಿಯ ನಡುವೆ ಯಾವುದೇ ಪಾಲುವಿಭಾಗವಾಗಿರುವುದಿಲ್ಲ. 1 ರಿಂದ 4ನೇ ವಾದಿಗಳು ಜಂಟಿ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ಪಿರ್ಯಾನಾಯ್ಕರವರ ವಾರಸುದಾರರಾಗಿರುವ ಕಾರಣ ದಾವಾ ಷೆಡ್ಯೂಲ್ ಐಟಂ ನಂ.1 ರಿಂದ 4ರ ಸ್ವತ್ತುಗಳಲ್ಲಿ ಪಾಲಿದ್ದು, 1 ರಿಂದ 4ನೇ ವಾದಿಗಳಿಗೆ ದಾವಾ ಷೆಡ್ಯೂಲ್ ಆಸ್ತಿಗಳ ಮೇಲೆ ಹಕ್ಕು ಅಧಿಕಾರ ಮತ್ತು ಬಾಧ್ಯತೆಗಳು ಇರುತ್ತವೆ. ದಾವಾ ಷೆಡ್ಯೂಲ್ ಆಸ್ತಿಗಳು ಪ್ರತಿವಾದಿಯ ಗಂಡನ ಹೆಸರಿನಲ್ಲಿದ್ದ ಕಾರಣ ಪ್ರತಿವಾದಿಯು ಪೌತಿ ವಾರಸಿನ ಮೇಲೆ 1 ರಿಂದ 4ನೇ ವಾದಿಗಳ ಗಮನಕ್ಕೆ ಬಾರದಂತೆ ಹಾಗೂ ಅವರ ಸಮ್ಮತಿಯನ್ನು ಪಡೆಯದೇ ದಾವಾ ಷೆಡ್ಯೂಲ್ ಆಸ್ತಿಗಳನ್ನು ಆಕೆಯ ಹೆಸರಿನಲ್ಲಿ ವರ್ಗಾವಣೆ ಮಾಡಿರುತ್ತಾರೆ. ಕಾರಣ ದಾವೆ ಅಂತಿಮವಾಗಿ ತೀರ್ಮಾನವಾಗುವವರೆಗೂ ತಾತ್ಕಾಲಿಕ ತಡೆಯಾಜ್ಞೆ ಪರಿಹಾರವನ್ನು ಕೇಳಿದ್ದು, ಕಾರಣ ವಾದಿಗಳು ಸದರಿ ದಾವೆಯಲ್ಲಿ ದಾವಾ ಷೆಡ್ಯೂಲ್ ಐಟಂ ನಂ.1 ರಿಂದ 4ರ ಸ್ವತ್ತುಗಳು ಜಂಟಿ ಅವಿಭಕ್ತ ಕುಟುಂಬದ ಸ್ವತ್ತುಗಳಾಗಿರುತ್ತವೆ, ವಾದಿಗಳು ಹಾಗೂ ಪ್ರತಿವಾದಿ ಜಂಟಿ ಅವಿಭಕ್ತ ಕುಟುಂಬದ ಸದಸ್ಯರುಗಳಾಗಿರುತ್ತಾರೆ, ಪ್ರತಿವಾದಿಯ ಗಂಡನು ಅವಿಭಕ್ತ ಕುಟುಂಬದ ಕರ್ತನಾಗಿರುವುದರಿಂದ ಸದರಿ ದಾವಾ ಆಸ್ತಿಗಳು ಆತನ ಹೆಸರಿನಲ್ಲಿ ಮಾಡಲಾಗಿತ್ತು

ಮತ್ತು ಅವರುಗಳ ನಡುವೆ ಯಾವುದೇ ಪಾಲುವಿಭಾಗವಾಗಿರುವುದಿಲ್ಲ ಎಂಬ ಸಂಗತಿಗಳನ್ನು ಮೇಲೆ ವಿವರಿಸಲಾದ 1 ರಿಂದ 3 ನೇ ಅಂಶಗಳೆನುಸಾರವಾಗಿ ರುಜುವಾತು -ಪಡಿಸುತ್ತಾರೆಯೇ ಎಂಬುದನ್ನು ನೋಡಬೇಕಾಗಿರುತ್ತದೆ. ಸದರಿ ವಾದಿಗಳ ವಾದಕ್ಕೆ ಸಂಬಂಧಪಟ್ಟಂತೆ ವಾದಿಗಳು ಹಾಜರುಪಡಿಸಿರುವಂತಹ ದಾಖಲಾತಿಗಳನ್ನು ನ್ಯಾಯಾಲಯವು ಕೂಲಂಕುಷವಾಗಿ ಪರಿಶೀಲಿಸಿರುತ್ತದೆ.

14. ವಾದಿಗಳು ಕೋಗಳಿ ಗ್ರಾಮದ ಸರ್ವೆ ಸಂಖ್ಯೆ 175 ರ 3 ಎಕರೆ 83 ಸೆಂಟ್ಸ ಸ್ವತ್ತು ಪೀರ್ಯಾನಾಯ್ಕರವರಿಗೆ ಸಂಬಂಧಪಟ್ಟಂತಹ ಸ್ವತ್ತಾಗಿದ್ದು 1 ರಿಂದ 4 ನೇ ವಾದಿಗಳು ಹಾಗೂ ಪ್ರತಿವಾದಿಯು ಅವರ ವಾರಸುದಾರರಾಗಿರುವ ಕಾರಣ ಸದರಿ ಸ್ವತ್ತಿನಲ್ಲಿ ಅವರಿಗೆ ಹಕ್ಕು ಹಾಗೂ ಬಾಧ್ಯತೆಗಳು ಇರುತ್ತವೆಂದು ರುಜುವಾತುಪಡಿಸಲು ಕೋಗಳಿ ಗ್ರಾಮ ಸರ್ವೆ ನಂ.175 ರ ಆರ್.ಟಿ.ಸಿ ಪಹಣಿಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ. ಸದರಿ ಆರ್.ಟಿ.ಸಿ ಪಹಣಿಪತ್ರಿಕೆಯನ್ನು ಕೂಲಂಕುಲಂಕುಷವಾಗಿ ಪರಿಶೀಲಿಸಲಾಗಿ ಮಾಲೀಕ ಕಬ್ಜೆದಾರನ ಹೆಸರು ಎನ್ನುವ ಕಾಲಂನಲ್ಲಿ ಅಂಬಾಡಿ ಬೋಜಪ್ಪ, ಅಂಬಾಡಿ ವೀರಪ್ಪ ಹಾಗೂ ಅಂಬಾಡಿ ಚಂದ್ರಮ್ಮರವರ ಹೆಸರುಗಳ ಉಲ್ಲೇಖವಿದ್ದು, ಪಟ್ಟಾದಾರನ ನಾಥೆಯಿಂದ ಸದರಿ ಸ್ವತ್ತಿನ ಸ್ವಾಧೀನತೆಯನ್ನು ಈ ವ್ಯಕ್ತಿಗಳು ಪಡೆದಿರುವುದಾಗಿ ಉಲ್ಲೇಖವಿರುತ್ತದೆ. ಮುಂದುವರೆದು ಮತ್ತೊಂದು ಪಹಣಿಪತ್ರಿಕೆಯಲ್ಲಿ ಸದರಿ ದಾವಾ ಸ್ವತ್ತು ಆರ್.ಟಿ.ಸಿ ಕಾಲಂ-9 ರಲ್ಲಿ ಭೀಮಾನಾಯ್ಕ, ಸಕ್ರಾನಾಯ್ಕ, ಪೀರ್ಯಾನಾಯ್ಕ, ಜಿ.ಚಂದ್ರಪ್ಪ, ರಾಮಾನಯ್ಕ ಬಿನ್ ಡಾರೀನಾಯ್ಕ ರವರ ಹೆಸರಿನಲ್ಲಿ ಪಟ್ಟಾದಾರ ನಾಥೆಯಲ್ಲಿ ಸ್ವಾಧೀನತೆಯನ್ನು ಹೊಂದಿರುವುದಾಗಿ ಉಲ್ಲೇಖವಿರುತ್ತದೆ. ತದನಂತರ

ಮುಂದುವರೆದು ದಿಃ 03-12-2003 ರಿಂದ ದಿಃ17-12-2014 ರ ಪಹಣಿ ಪತ್ರಿಕೆಯಲ್ಲಿ ಸದರಿ ಐಟಂ ನಂ.1 ರ ಆಸ್ತಿಯು ವಾದಿಗಳು ವಾದಪತ್ರದಲ್ಲಿ ಹೇಳಿದಂತೆ ಪ್ರತಿವಾದಿಯ ಗಂಡನಾದ ದಿಃ ಸಕ್ರನಾಯ್ಕುರವರ ಹೆಸರಿನಲ್ಲಿ ಖಾತಾ ನಂ.423 ಎಂ ಆರ್ ನಂ. 15/2003-04 ರಂತೆ ಖಾತಾ ವರ್ಗಾವಣೆಯಾಗಿರುತ್ತದೆ. ಪ್ರತಿವಾದಿಯ ಗಂಡ ಸಕ್ರಾನಾಯ್ಕುರವರ ಮರಣಾನಂತರ ಪೌತಿ ವಾರಸಿನ ಮೇಲೆ ದಾವಾ ಷೆಡ್ಯೂಲ್ ಐಟಂ ನಂ.1 ರ ಆಸ್ತಿಯು ಪ್ರತಿವಾದಿಯ ಹೆಸರಿನಲ್ಲಿ ದಿಃ 16-12-2014 ರ ಮ್ಯುಟೇಶನ್ ಸಂಖ್ಯೆ ಹೆಚ್54/2014-15 ರ ಪ್ರಕಾರ ಖಾತಾ ವರ್ಗಾವಣೆಯಾಗಿರುವುದನ್ನು ಕಾಣಬಹುದಾಗಿರುತ್ತದೆ.

15. ಪ್ರತಿವಾದಿಯು ಆಕೆಯ ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತಿನ ಐಟಂ ನಂ.2 ರ ಆಸ್ತಿಯನ್ನು ಆಕೆಯ ಗಂಡನು ದಿಃ06-05-1991 ರಂದು ಶ್ರೀ ಯಮುನಪ್ಪ ಯಾನೆ ಯಮುನಾನಾಯ್ಕು ಬಿನ್ ಗೋವಿಂದನಾಯ್ಕುರವರಿಂದ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಲಾಗಿದ್ದು ಆತನ ಮರಣಾನಂತರ ದಾವಾಸ್ವತ್ತು ಆಕೆಯ ಹೆಸರಿನಲ್ಲಿ ಪೌತಿ ವಾರಸಿನ ಮೇಲೆ ವರ್ಗಾವಣೆಯಾಗಿರುತ್ತದೆಂದು ರುಜುವಾತುಪಡಿಸಲು ಮೂಲ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.. ಸದರಿ ದಾಖಲಾತಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ವಾದಿಗಳು ಹೇಳಿರುವಂತೆ ದಾಖಲಾತಿಯ ಯಾವುದೇ ಒಕ್ಕಣೆಯಲ್ಲೂ ಸದರಿ ಆಸ್ತಿಯನ್ನು ಅವಿಭಕ್ತ ಕುಟುಂಬದ ಸಂಪಾದನೆಯಿಂದ ಖರೀದಿಸಿರುವ ಬಗ್ಗೆ ಉಲ್ಲೇಖವಿರುವುದಿಲ್ಲ. ಆದರೆ ವಾದಿಗಳ

ಪ್ರಕಾರ ಷೆಡ್ಯೂಲಿನ ಐಟಂ ನಂ.2ರ ಸ್ವತ್ತು ಕೂಡಾ ಜಂಟಿ ಕುಟುಂಬದಲ್ಲಿ ವಾಸವಿದ್ದಾಗ ಜಂಟಿ ಕುಟುಂಬದ ಆಸ್ತಿಯಿಂದ ಪ್ರತಿವಾದಿಯ ಗಂಡನು ತೆಗೆದುಕೊಂಡಂತಹ ಆಸ್ತಿಯಾಗಿರುವ ಕಾರಣ ಸದರಿ ಆಸ್ತಿಯಲ್ಲಿ 1 ರಿಂದ 4ನೇ ವಾದಿಗಳಿಗೆ ಹಕ್ಕು ಮತ್ತು ಹಿತಾಸಕ್ತಿ ಇದ್ದು ಸದರಿ ಆಸ್ತಿಯಲ್ಲಿ ಪಾಲನ್ನು ಹೊಂದಿರುತ್ತಾರೆನ್ನುವುದಾಗಿದ್ದು, ಆದರೆ ಜಂಟಿ ಅವಿಭಕ್ತ ಕುಟುಂಬದಿಂದ ಬಂದಂತಹ ಸಂಪಾದನೆಯಿಂದ ಐಟಂ ನಂ.2ರ ಸ್ವತ್ತನ್ನು ಪ್ರತಿವಾದಿಯ ಗಂಡನು ಖರೀದಿ ಮಾಡಿರುತ್ತಾನೆಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ವಾದಿಗಳು ಹಾಜರುಪಡಿಸಿರುವುದಿಲ್ಲ.

16. ದಾವಾ ಷೆಡ್ಯೂಲ್ ಸ್ವತ್ತಿನ ಐಟಂ ನಂ. 3 ಮತ್ತು 4ರ ಸ್ವತ್ತುಗಳು ಮನೆ ಆಸ್ತಿಗಳಾಗಿರುತ್ತವೆ. ವಾದಿಗಳು ಹಾಜರುಪಡಿಸಿದಂತಹ ಮಾಲವಿ ಗ್ರಾಮ ಪಂಚಾಯ್ತಿಯವರು ಕೊಟ್ಟಂತಹ ದೃಢೀಕರಣ ಪತ್ರವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ವಾರ್ಡ ಸಂಖ್ಯೆ: 7 ರ 91ನೇ ಆಸ್ತಿಯು ಪ್ರತಿವಾದಿಯ ಹೆಸರಿನಲ್ಲಿದ್ದು, 92ರ ಆಸ್ತಿಯು ಬಿ.ತಿಪ್ಪಾನಾಯ್ಕ ಬಿನ್ ಪಿರ್ಯಾನಾಯ್ಕರವರ ಹೆಸರಿನಲ್ಲಿರುವ ಬಗ್ಗೆ ಕೊಟ್ಟಂತಹ ದೃಢೀಕರಣ ಪತ್ರವಾಗಿರುತ್ತದೆ ಸದರಿ ದೃಢೀಕರಣ ಪತ್ರದಂತೆ ದಾವಾ ಷೆಡ್ಯೂಲಿನ ಐಟಂ ನಂ3 ರ ಆಸ್ತಿಯು ಪ್ರತಿವಾದಿಯ ಹೆಸರಿನಲ್ಲಿದ್ದು 4ರ ಆಸ್ತಿಯು ತಿಪ್ಪಾನಾಯ್ಕರವರ ಹೆಸರಿನಲ್ಲಿರುತ್ತದೆ ಎಂದು ಮೇಲ್ನೋಟಕ್ಕೆ ರುಜುವಾತಾಗುತ್ತದೆ.

17. ವಾದಿಗಳು ತಮ್ಮ ನಡುವೆ ಯಾವುದೇ ವಿಭಾಜನೆಯಾಗಿರುವುದಿಲ್ಲ ಎಂದು ಹೇಳುವಂತಹ ಸಂಗತಿಯು ದಾವಾ ವಿಚಾರಣಾ ಹಂತದಲ್ಲಿ ಮಾತ್ರ

ತೀರ್ಮಾನತಕ್ಕಂತಹ ಅಂಶವಾಗಿರುತ್ತದೆ. ಮುಂದುವರೆದು ವಾದಿಗಳು ಹಾಗೂ ಪ್ರತಿವಾದಿ ಜಂಟಿ ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿರುವ ಬಗ್ಗೆ ರುಜುವಾತುಪಡಿಸಲು ಕರ್ನಾಟಕ ವಿಧಾನಸಭಾ ಚುನಾವಣಾ ಪಟ್ಟಿಯ ದ್ಗಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಆದರೆ ಸದರಿ ದಾಖಲಾತಿಯು ವಾದಿಗಳು ಮತ್ತು ಪ್ರತಿವಾದಿ ಜಂಟಿ ಕುಂಟುಂಬದ ಸದಸ್ಯರಾಗಿದ್ದು ಅವರುಗಳು ಪ್ರತ್ಯೇಕವಾಗಿರುವುದಿಲ್ಲವೆಂದು ರುಜುವಾತುಪಡಿಸುವಂತಹ ನೈಜ್ಯ ದಾಖಲಾತಿಯಾಗಿರುವುದಿಲ್ಲ. ಕಾರಣ ಈ ಒಂದು ಹಂತದಲ್ಲಿ ಸದರಿ ಸಂಗತಿಯು ತೀರ್ಮಾನವಾಗುವುದಿಲ್ಲ. ಮೇಲಾಗಿ ದಾವಾಸ್ತಿಗಳು ಈಗಾಗಲೇ ಪ್ರತಿವಾದಿಯ ಹೆಸರಿನಲ್ಲಿ ವರ್ಗಾವಣೆಯಾಗಿದ್ದು, ಪ್ರತಿವಾದಿಯು ಸ್ತ್ರೀಯಾಗಿರುವ ಕಾರಣ ಒಂದು ಬಾರಿ ಯಾವುದೇ ಒಂದು ಆಸ್ತಿಯು ಆಕೆಯ ಹೆಸರಿನಲ್ಲಿ ವರ್ಗಾವಣೆಯಾಗಿದ್ದಲ್ಲಿ ಸದರಿ ಸ್ವತ್ತು ಸ್ತ್ರಿಧನ ಸ್ವತ್ತಾಗಿರುತ್ತದೆ. ಕಾರಣ ವಾದಿಗಳು ದಾವಾ ಆಸ್ತಿಗಳು ಜಂಟಿ ಅವಿಭಕ್ತ ಕುಟುಂಬದ ಆಸ್ತಿಗಳಾಗಿರುತ್ತವೆ ಎಂದು ರುಜುವಾತುಪಡಿಸುವಲ್ಲಿ ವಿಫಲರಾಗಿದ್ದು ***ಅಂಶ-1 ನ್ನು ನ್ಯಾಯಾಲಯವು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.***

**18. ಅಂಶ-2 ಃ** ವಾದಿಗಳು ಹಾಗೂ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವಂತಹ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ದಾವಾ ಷೆಡ್ಯೂಲ್ ಐಟಂ ನಂ.1 ರಿಂದ 3ರ ಆಸ್ತಿಗಳು ಈಗಾಗಲೇ ಪ್ರತಿವಾದಿಯ ಹೆಸರಿನಲ್ಲಿ ಮ್ಯುಟೇಶನ್ ವರ್ಗಾವಣೆಯಾಗಿದ್ದು ಸ್ತ್ರೀಧನ ಆಸ್ತಿಗಳಾಗಿ ಮಾರ್ಪಾಟಾಗಿರುತ್ತವೆ. ಕಾರಣ ಅನುಕೂಲತೆಯ ಒಲವು

ವಾದಿಗಳಿಗಿಂತ ಪ್ರತಿವಾದಿಯ ಪರವೇ ಹೆಚ್ಚಾಗಿರುವುದರಿಂದ **ಅಂಶ-2 ನ್ನು ನ್ಯಾಯಾಲಯವು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.**

**19. ಅಂಶ-3** ಃ ವಾದಿಗಳು ಹಾಗೂ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವಂತಹ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ದಾವಾ ಷೆಡ್ಯೂಲ್ ಐಟಂ ನಂ.1 ರಿಂದ 3ರ ಆಸ್ತಿಗಳು ಈಗಾಗಲೇ ಪ್ರತಿವಾದಿಯ ಹೆಸರಿನಲ್ಲಿ ಮ್ಯುಟೇಶನ್ ವರ್ಗಾವಣೆಯಾಗಿದ್ದು, ಈ ಒಂದು ಹಂತದಲ್ಲಿ ದಾವಾ ಷೆಡ್ಯೂಲಿನ 1 ರಿಂದ 3 ಆಸ್ತಿಗಳನ್ನು ವಾದಿಗಳು ಅವರ ಅರ್ಜಿಯಲ್ಲಿ ಕೇಳುವಂತೆ ಪ್ರತಿವಾದಿಯು 3ನೇ ವ್ಯಕ್ತಿಗೆ ಮಾರಾಟ, ಅಡಮಾನ, ದಾನ, ವಿಲ್ ನಾಮೆ ಹಾಗೂ ವಗೈರೆ ಮಾಡದಂತೆ ವಾದಿಗಳ ಪರವಾಗಿ ದಾವೆ ಅಂತಿಮವಾಗಿ ತೀರ್ಮಾನವಾಗುವವರೆಗೂ ತಾತ್ಕಾಲಿಕ ತಡೆಯಾಜ್ಞೆಯ ಪರಿಹಾರವನ್ನು ಕೊಟ್ಟಲ್ಲಿ ವಾದಿಗಳಿಗಿಂತ ಪ್ರತಿವಾದಿಗೆ ತುಂಬಲಾರದಂತಹ ನಷ್ಟ ಉಂಟಾಗುತ್ತದೆ. ಆ ನಷ್ಟವನ್ನು ಹಣದಿಂದ ಭರಿಸಲು ಸಾಧ್ಯವಿಲ್ಲ ಕಾರಣ ***ಅಂಶ-3 ನ್ಯಾಯಾಲಯವು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.***

**20. ಅಂಶ-4:** ಈ ಮೇಲ್ಕಂಡ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆ.

## : ಆದೇಶ :

ವಾದಿಯು ಸಲ್ಲಿಸಿರುವಂತಹ ಕ್ರಮಾದೇಶ -39 ನಿಯಮ-1 ಮತ್ತು 2 ಮಧ್ಯಂತರ ಅರ್ಜಿ ಸಂಖ್ಯೆ -1 ನ್ನು ತಿರಸ್ಕರಿಸಲಾಗಿರುತ್ತದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಅವರು ಅದನ್ನು ಬೆರಳಚ್ಚು ಮಾಡಿದ್ದು ತದನಂತರ ನಾನು ಸರಿಪಡಿಸಿ, ಸಹಿ ಮಾಡಿದ ನಂತರ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 11 ನೇ ಜುಲೈ 2022 ರಂದು ಉಚ್ಚರಿಸಲಾಗಿರುತ್ತದೆ)

(ಶ್ರೀಮತಿ ಭಾಗ್ಯಲಕ್ಷ್ಮಿ)
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹಗರಿಬೊಮ್ಮನಹಳ್ಳಿ.